ಭೂಮಿಯನ್ನು ದಿಟ್ಟಿಸುತ್ತಾ ಮಣಿಮೇಕಲೆ ಕಾಂಚೀಪುರದ ಜನರೊಂದಿಗೆ ಬಂದಳು.

ನಗರದ ಹೊರವಲಯದಲ್ಲಿದ್ದ ಹೊಲವೊಂದರಲ್ಲಿ, ಕುಡಿಯುವ ನೀರಿಗಾಗಿ ಕಾಂಚೀಪುರದ ಅರಸ ಬಾವಿಯೊಂದನ್ನು ತೋಡಿಸುತ್ತಿದ್ದ. ನೂರಾರು ಕೆಲಸಗಾರರು ಬಾವಿ ತೋಡುತ್ತಿದ್ದರು. ಹತ್ತಾಳುದ್ದ ತೋಡಿದ್ದರೂ ಬಾವಿಯಲ್ಲಿ ಜಲ ಬಿದ್ದಿರಲಿಲ್ಲ! ಆದರೂ ಅರಸ ಕೊನೆಯ ಪ್ರಯತ್ನವಾಗಿ ಇನ್ನೂ ಒಂದಾಳುದ್ದ ತೋಡಿಸಲು ಮುಂದಾಗಿದ್ದ. ಎಷ್ಟು ತೋಡಿದರೂ ಬಾವಿಯ ಮಣ್ಣು ಕಲ್ಲುಗುಂಡಿನಂತೆ ಕಿತ್ತು ಬರುತ್ತಿತ್ತು! ಕೊನೆಯ ಪಕ್ಷ ತೇವದ ಮಣ್ಣಾದರೂ ಸಿಕ್ಕಿದರೆ! ಅಲ್ಲಿ ನೀರಿನ ಒರತೆ ಇರಬಹುದೆಂದು ಊಹಿಸಬಹುದಾಗಿತ್ತು! ಆದರೆ ಆ ಆಸೆಯೂ ಕ್ಷೀಣಿಸಿತ್ತು. ರಾಜನ ಕಣ್ಣುಗಳಲ್ಲೂ ನೀರು ಬಸಿದುಹೋಗಿತ್ತು.

'ನಾನು ಎಲ್ಲಾ ಪ್ರಯತ್ನಗಳನ್ನೂ ಮಾಡಿದೆ. ಆದರೆ ನನ್ನ ಜನಗಳಿಗೆ ನೀರನ್ನೂ ಕೊಡಲಾಗಲಿಲ್ಲ! ಕಾಂಚೀಪುರದ ಜನಗಳು ಮಾಡಿದ ಪುಣ್ಯವೆಲ್ಲಾ ಇಂದಿಗೆ ಮುಗಿದುಹೋದಂತೆ ಕಾಣುತ್ತಿದೆ. ಇನ್ನು ದೇವರಿಟ್ಟಂತೆ ಆಗಲಿ. ನನ್ನ ಕೈಯಲ್ಲಂತೂ ಇನ್ನು ಏನೂ ಸಾಧ್ಯವಿಲ್ಲ!' ಎಂದು ರಾಜ ಅಲ್ಲಿಯೇ ಇದ್ದ ಮಣ್ಣಿನ ಗುಡ್ಡದ ಕೆಳಗೆ ನಿರಾಸೆಯಿಂದ ಕುಳಿತ.

ರಾಜನ ಪರಿವಾರದವರ ನಡುವಿದ್ದ ಒಬ್ಬ ಪುರೋಹಿತ ಮುಂದೆ ಬಂದು, 'ಹಾಗೆನ್ನಬೇಡಿ ದೊರೆಗಳೆ. ಇನ್ನೊಂದು ಕಟ್ಟಕಡೆಯ ಪ್ರಯತ್ನವನ್ನು ಮಾಡಿ. ಮಳೆ ಬರಬಹುದು!'

'ಪುರೋಹಿತರೆ, ಇದುವರೆಗೂ ನೀವು ಹೇಳಿದ್ದನ್ನೆಲ್ಲಾ ಮಾಡಿದೆ. ಪರ್ಜನ್ಯ ಯಾಗ, ಅಗ್ರಹಾರದ ವಿಪ್ರೋತ್ತಮರಿಗೆ ಧನಕನಕ, ದವಸ-ಧಾನ್ಯ, ವಸ್ತ್ರ ದಾನ, ಗೋದಾನ ಎಲ್ಲವನ್ನೂ ಮಾಡಿದೆ. ಆದರೂ ವರುಣ ನಮ್ಮ ನಗರದ ಮೇಲೆ ಕರುಣೆ ತೋರಲಿಲ್ಲ!' ಎಂದು ಸೋತ ದನಿಯಿಂದ ರಾಜ ಹೇಳಿದ. ರಾಜನ ಚಡಪಡಿಕೆ ಕ್ಷಣ ಕ್ಷಣಕ್ಕೂ ಹೆಚ್ಚಾಗುತ್ತಿತ್ತು.

ಅಷ್ಟರಲ್ಲಿ ಯಾರೋ ಒಬ್ಬ ಏದುಸಿರು ಬಿಡುತ್ತಾ ಓಡೋಡಿ ಬಂದು, ನಗರಕ್ಕೆ ಮಣಿಮೇಕಲೆ ಬಂದ ವಿಷಯವನ್ನು ಅರಸನಿಗೆ ತಿಳಿಸಿದ. ರಾಜನು ಕೂಡಲೇ ತನ್ನ ಮಂತ್ರಿಮಂಡಲದ ಪರಿವಾರದೊಂದಿಗೆ ಮಣಿಮೇಕಲೆಯನ್ನು ಬರಮಾಡಿಕೊಳ್ಳಲು ನಗರದ ಹೊರಗಿದ್ದ ಅಗಸೆ ಬಾಗಿಲಿನ ಬಳಿಗೆ ಬಂದ.

ಮಣಿಮೇಕಲೆಗೆ ವಂದಿಸಿ 'ಅಮ್ಮಾ ಮಣಿಮೇಕಲೆ, ನೀನು ನಮ್ಮ ರಾಜ್ಯಕ್ಕೆ ಬಂದಿದ್ದು ಸಮೃದ್ಧಿಯ ದೇವತೆಯೇ ಬಂದಂತಾಯಿತು! ನಮ್ಮ ರಾಜ್ಯ ತೀವ್ರವಾದ ಬರಗಾಲಕ್ಕೆ ತುತ್ತಾಗಿದೆ. ಜನರೆಲ್ಲಾ ಅನ್ನವಿಲ್ಲದೆ ಸೊರಗಿದ್ದಾರೆ. ದನ-ಕರುಗಳು ತಿನ್ನಲು ಮೇವು-ನೀರಿಲ್ಲದೆ ಸಾಯುತ್ತಿವೆ. ನನ್ನ ರಾಜ್ಯದ ಜನ ನಿನ್ನ ಬಳಿಗೆ ಬಂದು ಇದನ್ನೆಲ್ಲಾ ನಿನಗೆ ತಿಳಿಸಿರಬಹುದು! ಮಳೆ ಬರಲು ನಾನು ಕೈಗೊಳ್ಳದ ಧರ್ಮಕಾರ್ಯಗಳೇ ಇಲ್ಲ! ನಗರದ ಎಲ್ಲ ದೇವತೆಗಳಿಗೂ ಪೂಜೆ-ಪುನಸ್ಕಾರ ಮಾಡಿಸಿದೆ, ಋತ್ವಿಜರಿಂದ ಪರ್ಜನ್ಯ ಜಪ ಮಾಡಿಸಿದೆ, ಯಜ್ಞ-ಯಾಗಾದಿಗಳನ್ನು ಪುರೋಹಿತರಿಂದ ಮಾಡಿಸಿದೆ, ನಗರ ದೇವತೆಗೆ ಬಲಿಯನ್ನೂ ಕೊಟ್ಟೆ. ಆದರೂ ರಾಜ್ಯದ ಬರ ಇಂಗಲಿಲ್ಲ. ನನ್ನ ಆಳ್ವಿಕೆಯಲ್ಲಿ ಏನೋ ದೋಷವಾಗಿರುವಂತಿದೆ! ನಮ್ಮ ರಾಜ್ಯಕ್ಕೆ ಒದಗಿರುವ ಈ ವಿಪತ್ತನ್ನು ಹೋಗಲಾಡಿಸಿ, ನನ್ನ ಜನರನ್ನು ಕೈಹಿಡಿ' ಎಂದು ಕೈ ಜೋಡಿಸಿ ಬತ್ತಿದ ಧ್ವನಿಯಲ್ಲಿ ಭಿನ್ನವಿಸಿಕೊಂಡ. ಅವನ ಮಾತುಗಳೆಲ್ಲವೂ ನಿವೇದನೆಗಳಾಗಿದ್ದವು.

'ರಾಜ, ಎಲ್ಲವನ್ನೂ ಈ ಬಂಧುಗಳು ತಿಳಿಸಿದ್ದಾರೆ. ನನ್ನ ಗುರುಗಳಾದ ಅರವಣ ಅಡಿಗಳು ಮತ್ತು ಕವಿ ಶಾತ್ತನಾರ್ ಅವರು ತಿಳಿಸಿದಂತೆ ನಾನು ಇಲ್ಲಿಗೆ ಬಂದಿದ್ದೇನೆ' ಎಂದು ಮಣಿಮೇಕಲೆ ರಾಜನಿಗೆ ಹೇಳಿದಳು.

'ಅಮ್ಮಾ ಮಣಿಮೇಕಲೆ, ನೀನು ನನ್ನ ರಾಜ್ಯಕ್ಕೆ ಬಂದೇ ಬರುತ್ತೀಯಾ ಎಂದು ನನಗೆ ತಿಳಿದಿತ್ತು. ನಿನಗೆಂದೇ ನಗರದ ಹೊರವಲಯದಲ್ಲಿ ಒಂದು ವಿಹಾರವನ್ನು ಕಟ್ಟಿಸಿದ್ದೇನೆ. ನೀನು ಇರುವಷ್ಟು ದಿನ ಅಲ್ಲಿಯೇ ತಂಗು. ನಿನಗೆ ಯಾವ ತೊಂದರೆಯೂ ಆಗದಂತೆ ನಮ್ಮ ಪರಿವಾರದವರು ನಿನ್ನನ್ನು ನೋಡಿಕೊಳ್ಳುತ್ತಾರೆ'

'ರಾಜನೇ, ನಾನು ಪರಿವ್ರಾಜಕಳಾಗಿ ಎಲ್ಲದರಿಂದ ಬಿಡುಗಡೆ ಪಡೆದಿದ್ದೇನೆ. ನಾನು ಯಾರ ಅಧೀನದಲ್ಲೂ ಇರುವವಳಲ್ಲ; ಯಾರನ್ನೂ ಅಧೀನದಲ್ಲಿ ಇಟ್ಟುಕೊಳ್ಳುವವಳೂ ಅಲ್ಲ! ನನಗೆ ಯಾವ ಪರಿವಾರದ ಆರೈಕೆಯ ಅಗತ್ಯತೆ ಇಲ್ಲ. ನೀನು ಮೊದಲು ನಿನ್ನ ಯಜ್ಞಶಾಲೆಯನ್ನು ಉಳುವ ಭೂಮಿಯನ್ನಾಗಿ